ಸಂ: ಸಪ್ರಾಸಾಅ/ಝತಠಾ/ಮಾಹ/2017–18

ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ
ಝಳಕಿ ತನಿಖಾ ಠಾಣೆ

ದಿನಾಂಕ : 10/04/2017

**ಗೆ,**

**ಎನ್.ಐ.ಸಿ. ಅಧಿಕಾರಿಗಳು**

**ಜಿಲ್ಲಾ ಪಂಚಾಯತ ಕಛೇರಿ**

ವಿಜಯಪುರ

ಮಾನ್ಯರೇ,

ವಿಷಯ : ಮಾಹಿತಿ ಹಕ್ಕು ಅಧಿನಿಯಮ 2005ರಡಿಯಲ್ಲಿ 4(1)(ಎ) ಮತ್ತು 4(1) ಬಿ ರಡಿಯಲ್ಲಿ 2016–17ನೇ ಸಾಲಿನ ಮಾಹಿತಿಯನ್ನು ಅಂತರ ಜಾಲದಲ್ಲಿ ಪ್ರಕಟಿಸುವ ಕುರಿತು

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಝಳಕಿ ತನಿಖಾ ಕಛೇರಿಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಅಧಿನಿಯಮ 2005, 4(1)(ಎ) ಮತ್ತು 4(1) ಬಿ ರ ಮಾಹಿತಿಯ ಸಿ.ಡಿ.ಯನ್ನು ಅಂತರ ಜಾಲದಲ್ಲಿ ಪ್ರಕಟಿಸಲು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಸಲ್ಲಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿಕ,

ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ
ಝಳಕಿ ತನಿಖಾ ಠಾಣೆ

ಸಂ: ಸಪ್ರಾಸಾಅ/ಝುತಹಾ/ಮಾಹ/2017-18 ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ

ಝುಳಕಿ ತನಿಖಾ ಠಾಣೆ

ದಿನಾಂಕ : 10/04/2017

**ಗೆ,**

**ಮಾನ್ಯ ಸಾರಿಗೆ ಆಯುಕ್ತರು**

**ಬೆಂಗಳೂರು.**

ಮಾನ್ಯರೇ,

ವಿಷಯ : ಮಾಹಿತಿ ಹಕ್ಕು ಅಧಿನಿಯಮ 2005ರಡಿಯಲ್ಲಿ 4(1)(ಎ) ಮತ್ತು 4(1) ಬಿ ರಡಿಯಲ್ಲಿ 2016-17ನೇ ಸಾಲಿನ ಮಾಹಿತಿಯನ್ನು ಅಂತರ ಜಾಲದಲ್ಲಿ ಪ್ರಕಟಿಸುವ ಕುರಿತು.

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಝುಳಕಿ ತನಿಖಾ ಕಛೇರಿಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಅಧಿನಿಯಮ 2005, 4(1)(ಎ) ಮತ್ತು 4(1) ಬಿ ರ ಮಾಹಿತಿಯ ಸಿ.ಡಿ.ಯನ್ನು ತಮ್ಮ ಮುಂದಿನ ಕ್ರಮಕ್ಕಾಗಿ ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಸಲ್ಲಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿಕ,

ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ

ಝುಳಕಿ ತನಿಖಾ ಠಾಣೆ

**ಪ್ರತಿಯನ್ನು :**

1) ಮಾನ್ಯ ಜಂಟಿ ಸಾರಿಗೆ ಆಯುಕ್ತರು ಬೆಳಗಾವಿ ವಿಭಾಗ ಬೆಳಗಾವಿ ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.

ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ

ಝುಳಕಿ ತನಿಖಾ ಠಾಣೆ

# ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಗಳ ಕಛೇರಿ,
# ಝುಳಕಿ ತನಿಖಾ ಕೇಂದ್ರ

## ಮಾಹಿತಿ ಹಕ್ಕು ಅಧಿನಿಯಮ 2005ರ
## ಉಪ ವಿಭಾಗ 4(1)(ಬಿ) ವಿವರಗಳು

# ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಝುಳಕಿ ತನಿಖಾ ಠಾಣೆ

**ಸಂ: ಸಪ್ರಾಸಾಅ/ಝುತಠಾ/ಮಾಹಅಸೂ/ಸಿಬ್ಬಂದಿ/2016-17, ದಿನಾಂಕ : 01-01-2016 ರಿಂದ 31/12/2016, 2005ರ ಮಾಹಿತಿ ಹಕ್ಕು ಅಧಿನಿಯಮ ಕಲಂ 4(1)ಎ ಮತ್ತು 4(1)ಬಿ ಅಡಿಯಲ್ಲಿ ನಿಗದಿಪಡಿಸಿದಂತೆ ಹೊರಡಿಸಲಾದ ಅಧಿಸೂಚನೆ**

**4. ಸಾರ್ವಜನಿಕ ಅಧಿಕಾರಿಗಳ ಹೊಣೆಗಾರಿಕೆ :-**

**1) ಪ್ರತಿಯೊಬ್ಬ ಸಾರ್ವಜನಿಕ ಅಧಿಕಾರಿಯು :**

ಎ) ಈ ಅಧಿನಿಯಮದಡಿ ಮಾಹಿತಿ ಹಕ್ಕನ್ನು ಒದಗಿಸಲು ಅನುಕೂಲವಾಗುವಂತೆ ತನ್ನ ಎಲ್ಲಾ ಅಡಿಯಲ್ಲಿರುವ ದಾಖಲೆಗಳನ್ನು ಸೂಕ್ತವಾಗಿ ಗ್ರಂಥಸೂಚಿ ಮತ್ತು ಸೂಚಿಯ ರೀತಿಯಲ್ಲಿ ಮಾಡಿ ಗಣಕಯಂತ್ರಿಕರಿಸಿ ಪ್ರಾಪ್ತವಾದ ಎಲ್ಲಾ ಮಾಹಿತಿಯನ್ನು ಅಂತರ್ಜಾಲದ ಮೂಲಕ ಏರ್ಪಡಿಸುವುದು.

ಈ ತನಿಖಾ ಕೇಂದ್ರಯು ಮಹಾರಾಷ್ಟ್ರ ರಾಜ್ಯದ ಗಡಿಗೆ (ಸೋಲಾಪೂರ ರಸ್ತೆಗೆ) ರಾಷ್ಟ್ರೀಯ ಹೆದ್ದಾರಿ-13ರ ಮೇಲಿದೆ. ಈ ತನಿಖಾ ಕೇಂದ್ರದ ಮೂಲಕ ಹಾಯ್ದುಹೋಗುವ ಎಲ್ಲಾ ವರ್ಗದ ವಾಹನಗಳ ದಾಖಲೆಗಳನ್ನು ಪರಿಶೀಲಿಸುವುದು, ಪ್ರವರ್ತನ ಚಟುವಟಿಕೆಗಳನ್ನು ನಿರ್ವಹಿಸುವುದು, ತಾತ್ಕಾಲಿಕ ಪರವಾನಗಿ, ವಿಶೇಷ ಪರವಾನಗಿಗಳನ್ನು ನೀಡುವದು- ಇವು ಪ್ರಧಾನ ಕರ್ತವ್ಯಗಳಾಗಿರುತ್ತವೆ.

**4 (1) (ಬಿ)**

**1) ಸಂಘಟನೆ, ಪ್ರಕಾರ್ಯಗಳು ಮತ್ತು ಕರ್ತವ್ಯಗಳು :-**

ಈ ತನಿಖಾ ಠಾಣೆಯು 1984ರ ಡಿಸೆಂಬರ್ 05 ರಂದು ಕಾರ್ಯನಿರ್ವಹಿಸಲು ಆರಂಭಿಸಿತ್ತು. 1991ರಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಹುದ್ದೆ ಸೃಷ್ಟಿಯಾಯಿತು. ರಾಷ್ಟ್ರೀಯ ಹೆದ್ದಾರಿ-13ಕ್ಕೆ ಹೊಂದಿಕೊಂಡಂತೆ ಇರುವ ಪಿಡಬ್ಲ್ಯೂಡಿ ಕಟ್ಟಡದಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ ಮತ್ತು ಸಂಘಟನಾ ವ್ಯವಸ್ಥೆ ಈ ಕೆಳಗಿನಂತೆ ಇರುತ್ತದೆ.

ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು

⇓

ಹಿರಿಯ ಮೋಟರ ವಾಹನ ನಿರೀಕ್ಷಕರು/ಮೋಟರ ವಾಹನ ನಿರೀಕ್ಷಕರು

⇓

ಎಫ್.ಡಿ.ಎ.(1)/ಎಸ್‌ಡಿಎ(1)

⇓

ವಾಹನ ಚಾಲಕ (1)

⇓

ಡಿ ಗ್ರುಪ್ (3)

**ಮಂಜೂರಾದ ಹುದ್ದೆಗಳು :-**

| | | |
|---|---|---|
| ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು | - | 2 |
| ವಾಹನ ಚಾಲಕ | - | 1 |

ಹಿರಿಯ ಮೋಟರ ವಾಹನ ನಿರೀಕ್ಷಕರು, ಮೋಟರ ವಾಹನ ನಿರೀಕ್ಷಕರು ಮತ್ತು ಡಿ ಗ್ರುಪ್ ನೌಕರರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ವಿಜಯಪುರದಿಂದ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಒಬ್ಬ ಎಫ್‌ಡಿಎ(ಶ್ರೀ ರಾಘವೇಂದ್ರ ಯಡಳ್ಳಿ.) ಇವರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ವಿಜಯಪುರದಿಂದ ನಿಯೋಜನೆ ಮೇರೆಗೆ, ಒಬ್ಬ ಎಸ್‌ಡಿಎ (ಶ್ರೀ ವ್ಹಿ.ಎ.ಕಂಬಿ)ಇವರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ವಿಜಯಪುರದಿಂದ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದಾರೆ.

ಹಿರಿಯ ಮೋಟಾರು ವಾಹನ ನಿರೀಕ್ಷಕರು/ಮೋಟಾರು ವಾಹನ ನಿರೀಕ್ಷಕರು:–

1) ಶ್ರೀ.ವಿ.ಎಮ್.ಮಹಾಡೆ.ಹಿ.ಮೋ.ವಾ.ನಿ
2) ಶ್ರೀ.ವಿ.ಪಿ.ರಮೇಶ.ಹಿ.ಮೋ.ವಾ.ನಿ
3) ಶ್ರೀ.ಎಮ್.ಆರ್.ಬೆಳಗಲಪ್ಪ.ಹಿ.ಮೋ.ವಾ.ನಿ
4) ಶ್ರೀ.ಡಿ.ಬಿ.ನಾಗರಾಜ.ಮೋ.ವಾ.ನಿ
5) ಶ್ರೀ.ವರದರಾಜ.ಮೋ.ವಾ.ನಿ
6) ಸಿ.ಎಂ.ಕೃಷ್ಣೇಗೌಡ.ಹಿ.ಮೋ.ವಾ.ನಿ
7) ಶ್ರೀಜಿ.ಆರ್.ಮಂಜುನಾಥ.ಮೋ.ವಾ.ನಿ
8) ಶ್ರೀ.ಮೊಮ್ಮದ.ಇಜಾಜ್.ಮೋ.ವಾ.ನಿ
9) ಶ್ರೀ.ಅಶೋಕ.ಸಮಳದ.ಹಿ.ಮೋ.ವಾ.ನಿ
10) ಶ್ರೀ.ಎನ್.ರಂಜಿತ್.ಮೋ.ವಾ.ನಿ
11) ಶ್ರೀ.ಟಿ.ಎಸ್.ಗಿರಿಧರ.ಮೋ.ವಾ.ನಿ

**1) ಪ್ರಕಾರ್ಯಗಳು ಮತ್ತು ಕರ್ತವ್ಯಗಳು**

ಈ ತನಿಖಾ ಠಾಣೆಯು ಪ್ರಧಾನವಾಗಿ, ತನಿಖಾ ಕೇಂದ್ರದ ಮೂಲಕ ಹಾಯ್ದುಹೋಗುವ ಎಲ್ಲಾ ರೀತಿಯ ವಾಹನಗಳನ್ನು ತನಿಖಾಯಿಸಿ ದಂಡ ವಸೂಲಿ ಮಾಡುವದು, ತೆರಿಗೆ ಬಾಕಿ ಇದ್ದಲ್ಲಿ ವಸೂಲಿಸುವದು ಪ್ರಧಾನ ಕರ್ತವ್ಯಗಳಾಗಿರುತ್ತವೆ.

ಕರ್ನಾಟಕ ರಾಜ್ಯದ ಪರವಾನಗಿ ಹೊಂದಿರದೇ ಇರುವ ವಾಹನಗಳಿಗೆ ತಾತ್ಕಾಲಿಕ ಪರವಾನಗಿ/ ವಿಶೇಷ ಪರವಾನಗಿಗಳನ್ನು ನೀಡುವ ಇತರೆ ಕರ್ತವ್ಯಗಳಾಗಿರುತ್ತವೆ ಮತ್ತು ಈ ತನಿಖಾ ಕೇಂದ್ರದಲ್ಲಿ ವಸೂಲಿಸಿದ ತೆರಿಗೆ, ಶುಲ್ಕ, ದಂಡ ಪ್ರಕಾರದಲ್ಲಿ ಸಂಗ್ರಹಿಸಿದ ರಕ್ಕಂ ಅನ್ನು ಖಜಾನೆಗೆ ಸಂದಾಯಿಸಲಾಗುತ್ತದೆ.

**2) ಈ ಕಛೇರಿಯ ಅಧಿಕಾರಿಯ ಮತ್ತು ಸಿಬ್ಬಂದಿ ವರ್ಗದವರ ಅಧಿಕಾರ ಮತ್ತು ಕರ್ತವ್ಯಗಳು :-**

**(i)** <u>ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು</u> :- ಶ್ರೀ.ಬಿ.ಆರ್.ಮಂಜುನಾಥ ಇವರು ಈ ತನಿಖಾ ಕೇಂದ್ರದ ಮುಖ್ಯಸ್ಥರಾಗಿದ್ದು, ಮತ್ತು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರದ ಪದನಿಮಿತ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಾರೆ. ಈ ತನಿಖಾ ಕೇಂದ್ರ ಮೇಲ್ವಿಚಾರಣೆ, ನಿಯಂತ್ರಣ ಮತ್ತು ಸಮನ್ವ ಇವರು ಅಧಿಕಾರವಾಗಿರುತ್ತದೆ ಹಾಗೂ ತಾತ್ಕಾಲಿಕ ಪರವಾನಗಿ/ವಿಶೇಷ ಪರವಾನಗಿ, ಇಲಾಖಾ ಶಾಸನ ಪ್ರಕರಣಗಳ ಇತ್ಯರ್ಥ ಪಡಿಸುವ ಇತರ ಅಧಿಕಾರ ಮತ್ತು ಕರ್ತವ್ಯಗಳಾಗಿರುತ್ತವೆ.

**(ii)** ಶ್ರೀ ರಾಘವೇಂದ್ರ ಯಡಳ್ಳಿ ಪ್ರಥಮ ದರ್ಜೆ ಸಹಾಯಕರು, ಶ್ರೀ ವ್ಹಿ.ಎ.ಕಂಬಿ ದ್ವಿತೀಯ ದರ್ಜೆ ಸಹಾಯಕರು ಇವರುಗಳು ದಿನಕ್ಕೆ ಒಬ್ಬಂರತೆ ಕಾರ್ಯನಿರ್ವಹಿಸುತ್ತಾ, ಆಯಾ ಪಾಳೆಗಳಲ್ಲಿ ಬಂದ (ಕರ್ನಾಟಕ ರಾಜ್ಯ ಪರವಾನಗಿ ಹೊಂದಿರದ) ವಾಹನಗಳಿಗೆ ತಾತ್ಕಾಲಿಕ ಪರವಾನಗಿ/ವಿಶೇಷ ಪರವಾನಗಿ ನೀಡುವ, ವಸೂಲಾದ ತೆರಿಗೆ, ಶುಲ್ಕ, ದಂಡದ ರಕ್ಕಂ ಅನ್ನು ಖಜಾನೆಗೆ ಜಮಾ ಮಾಡುವದು, ಇಲಾಖಾ ಶಾಸನ ಪ್ರಕರಣಗಳ ವಿಲೇವಾರಿ ಕಾರ್ಯನಿರ್ವಹಿಸುತ್ತಾರೆ.

ಹಾಗೂ ಸಿಬ್ಬಂದಿ ಬಿಲ್ಲು, ತನಿಖಾ ಕೇಂದ್ರಕ್ಕೆ ಸಂಬಂಧಿಸಿದ ಅಂಕಿ-ಅಂಶಗಳ ನಿರ್ವಹಣೆ, ರಾಜ್ಯಸ್ವ ಮರು ಹೊಂದಾಣಿಕೆ ತಃಖ್ತೆ ನಿರ್ವಹಣೆ, ಆವಕ-ಜವಕ, ಪತ್ರ ವ್ಯವಹಾರಗಳ ನಿರ್ವಹಣೆ.

**(iii)** ಹಿರಿಯ ಮೋಟರ ವಾಹನ ನಿರೀಕ್ಷಕರು/ಮೋಟರ ವಾಹನ ನಿರೀಕ್ಷಕರು ದಿನದ ಮೂರು ಪಾಳೆಗಳಲ್ಲಿ, ತನಿಖಾ ಕೇಂದ್ರದ ಮೂಲಕ ಸಂಚರಿಸುವ ಎಲ್ಲಾ ಬಗ್ಗೆಯ ವಾಹನಗಳ– ತೆರಿಗೆ ಭರಿಸದ, ದಾಖಲೆ ರಹಿತ ವಾಹನಗಳ, ಅಧಿಕ ಭಾರ ಸಾಗಿಸುವ ವಾಹನಗಳ ಹಾಗೂ ಇತರೆ ನ್ಯೂನ್ಯತೆ ಹೊಂದಿದ ವಾಹನಗಳನ್ನು ತಪಾಸಣೆ ಮಾಡುವದು, ಜಪ್ತ ಮಾಡುವದು, ರಾಜಿ ಪ್ರಕರಣಗಳಿಗೆ ದಂಡ/ತೆರಿಗೆ ಸಂಗ್ರಹಿಸುವದು.

**(iv)** ವಾಹನ ಚಾಲಕ :– ಶ್ರೀ ಉಮೇಶ ಚೌಧರಿ ಇವರು ಪ್ರಾದೇಶಿಕ ಸಾರಿಗೆ ಕಛೇರಿ ವಿಜಯಪುರಕ್ಕೆ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

**(v)** ಡಿ ಗ್ರುಪ್ ಸಿಬ್ಬಂದಿ :– ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ವಿಜಯಪುರದಿಂದ ನಿಯೋಜನೆ ಮೇರೆಗೆ 03 ಜನ ಡಿ ಗ್ರುಪ್ ನೌಕರರು ಪಾಳೆಗೆ ಒಬ್ಬರಂತೆ ಅಧಿಕಾರಿಗಳ ನಿರ್ದೇಶನಗಳ ಮೇರೆಗೆ ಪ್ರವರ್ತನ ಸಿಬ್ಬಂದಿಗಳಿಗೆ ಸಹಾಯ ಮಾಡುವದು.

**3) ನಿರ್ಧಾರ ತೆಗೆದುಕೊಳ್ಳುವಲ್ಲಿ ಅನುಸರಿಸುವ ವಿಧಾನ ಮತ್ತು ಮೇಲ್ವಿಚಾರಣೆ ಹಾಗೂ ಹೊಣೆಗಾರಿಕೆ ಒಳಗೊಂಡಂತೆ:–**

ಈ ತನಿಖಾ ಕೇಂದ್ರಯು ಮೋಟರ ವಾಹನಗಳ ಅಧಿನಿಯಮ 1988, ಕೇಂದ್ರ ಮೋಟರ ವಾಹನಗಳ ನಿಯಮ 1989, ಕರ್ನಾಟಕ ಮೋಟರ ವಾಹನ ತೆರಿಗೆ 1957 ಮತ್ತು ಕರ್ನಾಟಕ ಮೋಟರ ವಾಹನ ನಿಯಮ 1989 ಹಾಗೂ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳಡಿ ನಿಯೋಜಿತ ಅಧಿಕಾರದಡಿ ಕಾರ್ಯನಿರ್ವಹಿಸುತ್ತಿದ್ದು, ಸಾರಿಗೆ ಇಲಾಖೆ ಆಧೀನ ಕಛೇರಿಯಾಗಿದ್ದರಿಂದ ಕಾಲ ಕಾಲಕ್ಕೆ ನೀಡುವ ಸುತ್ತೋಲೆ ಮತ್ತು ಅಧಿಸೂಚನೆಗಳ ಪ್ರಕಾರ ಹೊಣೆಗಾರಿಕೆಯಿಂದ ನಿಭಾಯಿಸಲಾಗುತ್ತದೆ.

**4) ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ತಾನು ಸೃಷ್ಟಿ ಮಾಡಿರುವ ನಿಯಮಗಳು :–**

ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಈ ಪ್ರಾಧಿಕಾರಯು ಸಾರಿಗೆ ಇಲಾಖೆಯ ಆಧೀನ ಕಛೇರಿಯಾಗಿದ್ದು, ಶ್ರೇಣಿ ಪದ್ಧತಿ ಅನುಸಾರ ಕಾರ್ಯನಿರ್ವಹಿಸುವದು ಮತ್ತು ಮೋಟರ ವಾಹನಗಳ ಅಧಿನಿಯಮ 1988, ಕೇಂದ್ರ ಮೋಟರ ವಾಹನಗಳ ನಿಯಮ 1989, ಕರ್ನಾಟಕ ಮೋಟರ ವಾಹನ ತೆರಿಗೆ 1957 ಮತ್ತು ಕರ್ನಾಟಕ ಮೋಟರ ವಾಹನ ನಿಯಮಗಳು 1989 ಹಾಗೂ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳಡಿ ಕಾರ್ಯನಿರ್ವಹಿಸುತ್ತಿದೆ ವಿನಃ ಸ್ವಾತಂತ್ರ್ಯವಾಗಿ ನಿಯಮಗಳನ್ನು ನಿರೂಪಿಸಿ ಕೊಳ್ಳುವ ಅಧಿಕಾರ ಪ್ರಾಪ್ತವಾಗಿರುವದಿಲ್ಲಾ.

**5) ಅಧಿಕಾರಿಗಳು ಮತ್ತು ಸಿಬ್ಬಂದಿ ಕೆಲಸವನ್ನು ನಿರ್ವಹಿಸಲು ಅವಶ್ಯವಿರುವ ಕಾಯ್ದೆ ಪುಸ್ತಕಗಳು, ಕೈಪಿಡಿ ಹಾಗೂ ದಾಖಲೆಗಳು :-**

1) ಮೋಟರ್ ವಾಹನಗಳ ಅಧಿನಿಯಮ 1988

2) ಕೇಂದ್ರ ಮೋಟರ ವಾಹನಗಳ ನಿಯಮ 1989

3) ಕರ್ನಾಟಕ ಮೋಟರ ವಾಹನ ತೆರಿಗೆ 1957

4) ಕರ್ನಾಟಕ ಮೋಟರ ವಾಹನ ನಿಯಮಗಳು 1989

5) ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ಕೈಪಿಡಿ, ಅನುಬಂಧ,ಅನುಸೂಚಿ ಮತ್ತು ಉಪಬಂಧುಗಳು.

6) ಕರ್ನಾಟಕ ಸರಕಾರಿ ನೌಕರ (ವೈದ್ಯಕೀಯ ಹಾಜರಾತಿ)ನಿಯಮಗಳು 1963

7) ಕರ್ನಾಟಕ ನಾಗರಿಕ ಸೇವಾಗ'ಳ ನಡತೆ ನಿಯಮಗಳು 1966

8) ಕರ್ನಾಟಕ ನಾಗರಿಕ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957.

9) ವಾರ್ಷಿಕ ಕಾರ್ಯನಿರ್ವಹಣಾ ವರದಿ ನಿಯಮಗಳು

10) ಕರ್ನಾಟಕ ಆರ್ಥಿಕ ಸಂಹಿತೆ

11) ಸಾದಿವಾರು ವೆಚ್ಚ ಕೈಪಿಡಿ 1958

12) ಕರ್ನಾಟಕ ರಾಜ್ಯ ಸರಕಾರಿ ನೌಕರರ ಗುಂಪು ವಿಮಾ ನಿಯಮಗಳು 1981

13) ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957

14) ಕಾಲ ಕಾಲಕ್ಕೆ ನೀಡಿದ ಸರಕಾರ, ಕೇಂದ್ರ ಕಛೇರಿ ಇನ್ನಿತರೆ ಸಕ್ಷಮ ಪ್ರಾಧಿಕಾರದಿಂದ ಹೊರಡಿಸಲಾದ ಸುತ್ತೋಲೆ ಅಧಿಸೂಚನೆ ಆದೇಶಗಳು

**6) ಈ ಪ್ರಾಧಿಕಾರಯು ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ದಾಸ್ತಾವೇಜುಗಳ ವಿವರ :-**

1) ವೇತನ ಭತ್ಯೆ ಪಾವತಿ ವಹಿ

2) ಸಿಬ್ಬಂದಿ ನಗದು ಪುಸ್ತಕ

3) ಅನುದಾನ ವಹಿ

4) ಸಾದಿಲ್ವಾರು ವೆಚ್ಚ ವಹಿ

5) ಸೇವಾ ವಹಿ

6) ಮಾಸಿಕ ವೆಚ್ಚ ತಃಖ್ತೆಗಳು

7) ಮಾಸಿಕ ಕಾರ್ಯ ವರದಿ

8) ಹಾಜರಾತಿ ಪುಸ್ತಕ

9) ಸಾಂದರ್ಭಿಕ ರಜೆ ಲೆಕ್ಕ ವಹಿ

10) ಸಾಮಾನ್ಯ ಸ್ವೀಕೃತಿ ವಹಿ

11) ಸಾಮಾನ್ಯ ರವಾನೆ ವಹಿ

12) ವಿಷಯ ವಹಿಗಳು

13) ಪಿಠೋಪಕರಣಗಳ ದಾಸ್ತಾನು ವಹಿ

14) ವೇತನ ಬಡ್ತಿ ಕಾವಲು ವಹಿ

15) ವಾಹನ ಜಪ್ತು ವಹಿ

16) ಸಿ.ಆರ್.ಆರ್.ದಂಡ ವಸೂಲಿ ವಹಿ

17) ಸಾಮಾನ್ಯ ನಗದು ವಹಿ

18) ಇತರೆ ದಾಸ್ತಾನು ವಹಿಗಳು

19) ವೈಯಕ್ತಿಕ ಕಡತಗಳು

20) ವಿವರ ಸಾದಿಲ್ವಾರು ವೆಚ್ಚ ಬಿಲ್ಲುಗಳ ಕಡತಗಳು

21) ರಾಜ್ಯಸ್ವ ಮರು ಹೊಂದಾಣಿಕೆ ತಃಖ್ತೆಗಳು

22) ವೆಚ್ಚ ಪಟ್ಟಿ ತಃಖ್ತೆಗಳು

**7) ಕಾರ್ಯನೀತಿಯ ರಚನೆ ಅಥವಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾನಿಧ್ಯ ಇರುವಂತೆ ಮಾಡಲು ಇರುವಂತಹ ವ್ಯವಸ್ಥೆಗಳ ವಿವರ :-**

ಈ ಪ್ರಾಧಿಕಾರಯು ಸಾರಿಗೆ ಇಲಾಖೆ ಆಧೀನ ಕಛೇರಿಯಾಗಿದ್ದು ಮೋಟರ ವಾಹನ ನಿಯಮಗಳು ಮತ್ತು ಕೇಂದ್ರ ಕಛೇರಿಯ ನಿರ್ದೇಶನಗಳಂತೆ ಕಾರ್ಯನಿರ್ವಹಿಸುತ್ತಿರುವದು. ಆದರೆ ಸ್ವಾತಂತ್ರ್ಯವಾಗಿ ಕಾರ್ಯನೀತಿ ರೂಪಿಸುವ ಕಾರ್ಯ ಪ್ರಾಪ್ತವಾಗಿರುವದಿಲ್ಲಾ. ಆದಾಗ್ಯೂ ಸಾರ್ವಜನಿಕರು ಮುಕ್ತವಾಗಿ ಸಲಹೆ ನೀಡಲು ಬಯಿಸಲಾದಾಗ ಸಲಹಾ ಪಟ್ಟಿಗೆ ಇಟ್ಟಿದ್ದು, ಈ ಮೂಲಕ ಸಾರ್ವಜನಿಕರು ತಮ್ಮ ಪ್ರಾನಿಧ್ಯವನ್ನು ವಹಿಸುವದು. ಈ ಸಂಬಂಧ ಈ ಪ್ರಾಧಿಕಾರದ ಮೇಲಾಧಿಕಾರಿಗಳ ಸೂಚನೆ ಮೇರೆಗೆ ಸಾರ್ವಜನಿಕ ಸಭೆ ಮತ್ತು ಸಮಾಲೋಚನೆ ಏರ್ಪಡಿಸುವ ವ್ಯವಸ್ಥೆ ಇರುವದಿಲ್ಲ.

**8) ಮಂಡಳಿಗಳು, ಕೌನ್ಸಿಲ್‌ಗಳ, ಸಮೀತಿಗಳ ಮತ್ತು ಇತರೆ ನಿಯಮಗಳು :– ಭಾಗವಹಿಸಲು ಅಥವಾ ಸಲಹೆಗಾಗಿ ಸ್ಥಾಪಿವಾಗಿರುವ ಇಬ್ಬರು ಹೆಚ್ಚಿನ ವ್ಯಕ್ತಿಗಳನ್ನು ಹೊಂದಿರುವ ಆ ಮಂಡಳಿಗಳ, ಕೌನ್ಸಿಲ್‌ಗಳ, ಸಮೀತಿಗಳ ಮತ್ತು ಇತರೆ ನಿಕಾಯಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತದೆಯೇ? ಅಂತಹ ಸಭೆಗಳ ಟಿಪ್ಪಣೆಗಳನ್ನು ಸಾರ್ವಜನಿಕರು ಅವಲೋಕಿಸಬಹುದಾಗಿದೆಯೇ?**

ಈ ಪ್ರಾಧಿಕಾರಯು ಸಾರಿಗೆ ಇಲಾಖೆಯ ಆಧೀನ ಕಛೇರಿಗಾಗಿ ಕಾರ್ಯ ನಿರ್ವಹಿಸಲ್ಪಡುತ್ತಿರುವದ್ದರಿಂದ ಅಂತಹ ಸಮೀತಿ ಮಂಡಳಿ, ಕೌನ್ಸಿಲ್ ಮತ್ತು ನಿಕಾಯಗಳು ಅಸ್ಥಿತ್ವದಲ್ಲಿರುವದಿಲ್ಲಾ.

**9) ಅದರ ಅಧಿಕಾರಗಳ ಮತ್ತು ಸಿಬ್ಬಂದಿ ಕೈಪಿಡಿ :–**

ಇಲ್ಲಾ

**10) ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಮಾಸಿಕವಾಗಿ ಸ್ವೀಕರಿಸುವ ಸಂಭಾವಣೆ :-**

| ಕ್ರ.ಸಂ. | ಪದನಾಮ ಮತ್ತು ಹೆಸರು ಪಡೆಯುತ್ತಿರುವ ಸಂಭಾವಣೆ | ಒಟ್ಟು ಮೊತ್ತ |
|---|---|---|
| 01. | ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ: -ಖಾಲಿ ಇದೆ | - |
| 02 | ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ: -ಖಾಲಿ ಇದೆ | - |
| 03 | ವಾಹನ ಚಾಲಕ : ಶ್ರೀ ಉಮೇಶ ಚೌಧರಿ | ರೂ. 19692-00 |

**11) ಎಲ್ಲ ಯೋಜನೆಗಳು, ಪ್ರಸ್ತಾವಿಕ ಖರ್ಚುಗಳ ವಿವರಗಳು ಮತ್ತು ಬಟವಡೆಗಳ ಮೇಲಿನ ವರದಿಯನ್ನು ಸೂಚಿಸಿ ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆಯಾಗಿರುವ ಬಜೆಟ್ :-**

ಈ ಕಛೇರಿಯಲ್ಲಿ ಯಾವುದೇ ಯೋಜನೆಗಳು ಅಸ್ತಿತ್ವದಲ್ಲಿರುವದಿಲ್ಲ. ಈ ಕಛೇರಿಗೆ ವಿವರ ಸಾದಿಲ್ವಾರು ವೆಚ್ಚಕ್ಕಾಗಿ ಇಲ್ಲಿಯವರೆಗೆ ರೂ.20.50.0000/- ಹಂಚಿಕೆಯಾಗಿದ್ದು, ರೂ.17,04,328/- ಖರ್ಚಾಗಿರುತ್ತದೆ.

ಯಾವುದೇ ಏಜೆನ್ಸಿಗಳು ಇರುವದಿಲ್ಲಾ.

**12) ಸಬ್ಸಿಡಿ ಕಾರ್ಯಕ್ರಮಗಳ ಕಾರ್ಯರೂಪಕ್ಕೆ ತರುವ ವಿಧಾನ, ಅದರೊಂದಿಗೆ ಅವುಗಳಿಗೆ ಇಟ್ಟಿರುವ ಮೊತ್ತ ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳು :-**

ಈ ಕಛೇರಿಯಲ್ಲಿ ಸಬ್ಸಿಡಿ ಕಾರ್ಯಕ್ರಮಗಳು ಜಾರಿಯಲ್ಲಿ ಇರುವದಿಲ್ಲಾ. ಅಂತಹ ಕಾರ್ಯಕ್ರಮಗಳು ಬಂದಲ್ಲಿ ಅಧಿಸೂಚನೆಯನ್ನು ಕಾಲೋಚಿತಗೊಳಿಸಿ ವಿವರ ನೀಡಲಾಗುವದು.

**13) ಅದರಿಂದ ಮಂಜೂರಾದ ರಿಯಾಯ್ತಿಗಳು, ರಹದಾರಿಗಳು ಮತ್ತು ಅನುಮತಿಯನ್ನು ಪಡೆದ ಫಲಾನುಭವಿಗಳ ವಿವರ :-**

ಇರುವದಿಲ್ಲಾ.

**14) ಈ ಪ್ರಾಧಿಕಾರದ ವಶದಲ್ಲಿರುವ ಅಥವಾ ಲಭ್ಯವಿರುವ ಮಾಹಿತಿಯನ್ನು ವಿದ್ಯುನ್ಮಾನ ರೂಪಕ್ಕೆ ಇಳಿಸಿದ್ದ ವಿವರ :-**

ಈ ಪ್ರಾಧಿಕಾರ ಇನ್ನೂ ಗಣಕೀಕರಣ ಕಾರ್ಯ ಪ್ರಗತಿಯಲ್ಲಿ ಇರುವದರಿಂದ ಲಭ್ಯವಿರುವ ಮಾಹಿತಿಯನ್ನು ವಿದ್ಯುನ್ಮಾನ ರೂಪಕ್ಕೆ ಇಳಿಸಿರುವದಿಲ್ಲಾ.

**15) ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯ ಅಥವಾ ವಾಚನಾಲಯ ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು:-**

ಈ ತನಿಖಾ ಕೇಂದ್ರದಲ್ಲಿ ಗ್ರಂಥಾಲಯ ಅಥವಾ ವಾಚನಾಲಯ ಇರುವದಿಲ್ಲಾ. ಆದರೆ ಸಾರ್ವಜನಿಕರು ಯಾವುದೇ ಮಾಹಿತಿ ಪಡೆಯಬಹುದಾಗಿದೆ.

ಹಣ ಪಾವತಿಸುವ ಸಮಯ : ದಿನದ 24 ಗಂಟೆ ಕಾರ್ಯನಿರ್ವಹಿಸುತ್ತಿದೆ.

**16) ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮ ಮತ್ತು ಇತರ ವಿವರಗಳು :-**

| ಸಾರ್ವಜನಿಕ ಮಾಹಿತಿ ಪ್ರಾಧಿಕಾರ | ಸಾರ್ವಜನಿಕ ಮಾಹಿತಿ ಅಧಿಕಾರಿ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ |
|---|---|---|
| **ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಝುಳಕಿ ತನಿಖಾ ಠಾಣೆ** | **ಶ್ರೀ ಬಿ.ಆರ್.ಮಂಜುನಾಥ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ (ಪ್ರಭಾರಿ)** | **ಶ್ರೀ.ರಾಘವೇಂದ್ರ ಯಡಳ್ಳಿ ಪ್ರಥಮ ದರ್ಜೆ ಸಹಾಯಕ (ನಿಯೋಜನೇ ಮೇರೆಗೆ)** |

**4(1)ಬಿ (xvi) ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮ ಮತ್ತು ಇತರ ವಿವರಗಳು :-**

1) ಮೇಲ್ಮನವಿ ಪ್ರಾಧಿಕಾರ :- ಶ್ರೀ.ಬಿ.ಪಿ.ಉಮಾಶಂಕರ
ಜಂಟಿ ಸಾರಿಗೆ ಆಯುಕ್ತರು ಬೆಳಗಾವಿ ವಿಭಾಗ
ಆರ್.ಟಿ.ಒ.ಕಛೇರಿ, ಆವರಣ, ಬೆಳಗಾವಿ

**4(1)ಬಿ (xvii) ನಿಯಮಿಸಬಹುದಾದಂತಹ ಇತರೆ ಮಾಹಿತಿಯನ್ನು ಪ್ರಕಟಿಸತಕ್ಕದ್ದು :-**

ಅ) ಈ ಕಛೇರಿಗೆ ಒಟ್ಟು 2016-17ನೇವರ್ಷದ ಸಾಲಿನಲ್ಲಿ ಒಟ್ಟು 11ಕೋಟಿ 56ಲಕ್ಷ ರಾಜ್ಯಸ್ವ ವಸೂಲಾತಿಗೆ ಗುರಿ ನಿಗದಿಪಡಿಸಲಾಗಿದ್ದು, ಅದರಲ್ಲಿ ದಿನಾಂಕ : 31-12-2016ರ ಅಂತ್ಯಕ್ಕೆ ರೂ.96284771/- ಶೇಖಡಾ.111.05% ವಸೂಲಿ ಮಾಡಲಾಗಿದೆ. ಅದರಂತೆ ನಿಗದಿಪಡಿಸಿದ ಗುರಿಯನ್ನು ಮೀರಿ ಸಾಧಿಸಲಾಗಿದೆ.

ಆ) ಕೇಂದ್ರ ಕಛೇರಿಯಾದ ಮಾನ್ಯ ಸಾರಿಗೆ ಆಯುಕ್ತರ ಕಛೇರಿ ಬೆಂಗಳೂರಿನಿಂದ ಬಿಡುಗಡೆಯಾದ ವೈಬ್‌ಸೈಟ್ www.rto.kar.nic.co ರಲ್ಲಿ ಸಾರ್ವಜನಿಕರು ತಮ್ಮ ಕೆಲಸ ಕಾರ್ಯಗಳಿಗೆ ಅನುಸಾರ ಬೇಕಾದ ಸೂಕ್ತ ಮಾರ್ಗದರ್ಶನ ಪ್ರಕಟಿಸಲಾಗಿದೆ.

ಸಾರ್ವಜನಿಕ ಮಾಹಿತಿ ಅಧಿಕಾರಿ,
ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ,
ಝುಳಕಿ ತನಿಖಾ ಕೇಂದ್ರ

ನಮ್ಮ ಕಛೇರಿಯು ಭಾಗಶಃ ಗಣಕೀಕರಣಗೊಂಡಿದ್ದು ಗಣಕೀರಣವಾಗಿರುವ ವಿವರಗಳನ್ನು ಮಾತ್ರ ಫ್ಲಾಪಿ/ಸಿ.ಡಿ.ಡಿಸ್ಕ ರೂಪದಲ್ಲಿ ನೀಡಬಹುದು.

ಸಾರ್ವಜನಿಕ ಪ್ರಾಧಿಕಾರವು (ಸಕ್ಷಮ ಪ್ರಾಧಿಕಾರಿ) 30 ದಿನಗಳಲ್ಲಿ ಕೋರಿದ ಮಾಹಿತಿಯನ್ನು ನೀಡಿದಿದ್ದಲ್ಲಿ ಪ್ರಾದಿಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸಲು ಅವಕಾಶವಿದೆ. ಈ ಇಬ್ಬರೂ ಅಧಿಕಾರಿಗಳು ಮಾಹಿತಿಯನ್ನು ನೀಡಲು ಸಹಕರಿಸದೇ ಇದ್ದರೇ ಈ ಕೆಳಕಂಡ ಅಧಿಕಾರಿಗಳಿಗೆ ದೂರನ್ನು ಸಲ್ಲಿಸಬಹುದು.

1) ಸಾರಿಗೆ ಆಯುಕ್ತರು 1ನೇ ಮಹಡಿ ಟಿ.ಟಿ.ಎಂ.ಸಿ ಕಟ್ಟಡ
   ಶಾಂತಿನಗರ, ಬೆಂಗಳೂರು –

2) ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,
   (ಜನ ಸ್ಪಂದನ)20ನೇ ಮಹಡಿ ಬೆಂಗಳೂರು– 560 001

ವಿ.ಸೂ– 4(ಬಿ) ಅಡಿಯಲ್ಲಿ ಮಾಹಿತಿಯನ್ನು ಮಾನ್ಯ ಸಾರಿಗೆ ಆಯುಕ್ತರು ಇಲಾಖೆಯ ಎಲ್ಲಾ ಕಛೇರಿಗಳ ಮಾಹಿತಿಯನ್ನು ವೆಬ್ ಸೈಟ್ www.rto.kar.nic.co ರಲ್ಲಿ ಪ್ರಕಟಿಸಿದ್ದಾರೆ. ಅದನ್ನು ಡೌನ ಲೋಟ್ ಮಾಡಿ ಮಾಹಿತಿಯನ್ನು ಪಡೆಯಬಹುದುದಾಗಿದೆ.

ಸಾರ್ವಜನಿಕ ಮಾಹಿತಿ ಅಧಿಕಾರಿ,
ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ,
ಝುಳಕಿ ತನಿಖಾ ಕೇಂದ್ರ

**17) ಯಾವುದೇ ತರಹದ ಮಾಹಿತಿ :-** ತದನಂತರ ಪ್ರತಿ ವರ್ಷ ಈ ಪ್ರಕರಣಗಳನ್ನು ಕಾಲೋಚಿತಗೊಳಿಸುವುದು.

ಸದರಿ ಮೇಲಿನ ಅಧಿಸೂಚನೆ ಡಿಸೆಂಬರ್ 2016ರ ಅಂತ್ಯದಂತೆ ಇರುವುದು. ನಂತರದ ಅಧಿಸೂಚನೆಗಳನ್ನು ಡಿಸೆಂಬರ್ 2017ಕ್ಕೆ ಕಾಲೋಚಿತಗೊಳಿಸಲಾಗುವುದು.

**ಸಾರ್ವಜನಿಕ ಮಾಹಿತಿ ಅಧಿಕಾರಿ**
**ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ**
**ಝಳಕಿ ತನಿಖಾ ಠಾಣೆ**
**ಜಿಲ್ಲಾ ವಿಜಯಪುರ**

ನಮೂನೆ
(ಮಾಪಹ ಅಧಿನಿಯಮ 2005ರ 6(1) ಮತ್ತು 7(1)ನೇ ಪ್ರಕರಣ)

| | | |
|---|---|---|
| 1 | ಅರ್ಜಿದಾರನ ಪೂರ್ಣ ಹೆಸರು | |
| 2 | ವಿಳಾಸ | |
| 3 | ಕೋರಿದ ದಾಖಲೆ/ಪರಿಶೀಲನೆ/ಮಾದರಿಯ ವಿವರ | |
| 4 | ಮೇಲಿನವು ಯಾವ ವರ್ಷಕ್ಕೆ ಸಂಬಂಧಿಸಿವೆ. | |
| 5 | ಮಾಹಿತಿಯನ್ನು ಯಾವ ಸಾರ್ವಜನಿಕ ಮಾಹಿತಿ ಅಧಿಕಾರಿಯಿಂದ ಕೋರಿದೆಯೋ ಆ ಅಧಿಕಾರಿಯ ಪದನಾಮ ಮತ್ತು ವಿಳಾಸ | |

ಸ್ಥಳ :

ದಿನಾಂಕ : ಅರ್ಜಿದಾರನ ಸಹಿ.